ಅಸಲು ದಾವಾ ನಂ. 298/2023 ಪಿ .ಡಬ್ಲ್ಯೂ3-ರಂಗಪ್ಪ ತಂದೆ ಪುಂಡಪ್ಪ ತಳವಾರ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16/06/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ – ವಾದಿ ಪರ ಶ್ರೀ GBH ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿ ಪರ ಸಾಕ್ಷಿ ಇರುತ್ತೇನೆ. ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನಾನು ಸದರಿ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ತಿಳಿದುಕೊಂಡು ಸದರಿ ಪ್ರಮಾಣ ಪತ್ರಕ್ಕೆ ಸಹಿಯನ್ನು ಮಾಡಿರುತ್ತೇನೆ.

ವಾದಿಯ ದಾವೆಯನ್ನು ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ವಿಡಿಪಿ ರವರಿಂದಃ**

ನಾನು ಹಿರೇಮಣ್ಣೂರು ಗ್ರಾಮದಲ್ಲಿ ವಾಸವಾಗಿರುತ್ತೆನೆ ಎಂದರೆ ಸರಿ. ಹಿರೇಮಣ್ಣೂರು ಗ್ರಾಮದಲ್ಲಿ ನನಗೆ ಸೇರಿದ ಹೊಲ ಮನೆ ಇರುತ್ತವೆ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ ಯಾರು ಕರೆದುಕೊಂಡು ಬಂದರು ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಯಾರು ಕರೆದುಕೊಂಡು ಬಂದಿರುವುದಿಲ್ಲ. ನಾನೇ ಬಂದಿರುತ್ತೇನೆ ಎಂದು ನುಡಿದಿರುತ್ತಾರೆ. ನನಗೆ ಸಾಕ್ಷಿ ಹೇಳಲು ನ್ಯಾಯಾಲಯದಿಂದ ಯಾವುದೇ ನೋಟಿಸ ಬಂದಿರುವುದಿಲ್ಲ. ಸಾಕ್ಷಿಯು ಮುಂದುವರೆದು 3 ನೇ ವಾದಿಯವರು ನಮ್ಮದು ನ್ಯಾಯಾಲಯದಲ್ಲಿ ಪ್ರಕರಣ ಇರುತ್ತದೆ ಸಾಕ್ಷಿ ಹೇಳಲು ಬರಬೇಕೆಂದು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. 3 ನೇ ವಾದಿಯವರು ಸಾಕ್ಷಿ ಹೇಳಲು ನನಗೆ ಇವತ್ತೆ ಹೇಳಿರುತ್ತಾರೆ. ನಾನು ಮತ್ತು ವಾದಿ ಸಾಕ್ಷಿ 2 ರವರು 3 ನೇ ವಾದಿಯವರು ಹೇಳಿದ ಮೇರೆಗೆ ಸಾಕ್ಷಿ ಹೇಳಲು ಬಂದಿರುತ್ತೇವೆ ಎಂದರೆ ಸರಿ. ನನಗೆ ದಾವಾ ಆಸ್ತಿಯ ಸರ್ವೆ ನಂಬರ ತಿಳಿದಿರುತ್ತದೆ ಆದರೆ ಅವುಗಳ ಹಿಸ್ಸಾ ನಂಬರ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಸರ್ವೆ ನಂ.3 , ವಿಸ್ತೀರ್ಣ 1 ಎಕರೆ 21 ಗುಂಟೆ , ಸರ್ವೆ ನಂ.40 ವಿಸ್ತೀರ್ಣ 3 ಎಕರೆ 35 ಗುಂಟೆ, ಸರ್ವೆ ನಂ.49 ವಿಸ್ತೀರ್ಣ 1 ಎಕರೆ 6 ಗುಂಟೆ ಇರುತ್ತವೆ. ದಾವಾ ಆಸ್ತಿಗಳು ವಾದಿಯವರಿಗೆ ಅವರ ತಂದಯವರು ಪಾಲು ವಿಭಾಗ ಮಾಡಿಕೊಂಡಿದ್ದರಿಂದ ಬಂದಿರುತ್ತವೆ. ವಾದಿಯವರ ತಂದೆಯವರು ಇದ್ದಾಗಲೇ ಪಾಲು ವಿಭಾಗವಾಗಿರುತ್ತದೆ ಎಂದರೆ ಸರಿ. ಪಾಲು ವಿಭಾಗ ಆದಾಗಿನಿಂದ ವಾದಿಯವರು ಮತ್ತು 2 ನೇ ಪ್ರತಿವಾದಿಯವರು ತಮ್ಮ ತಮ್ಮ ಹಿಸ್ಸಾದಲ್ಲಿಯೇ ಇರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯವರು ವಾದಿಯವರ ಸ್ವಾಧೀನಕ್ಕೆ ಎಂದಿಗೂ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯವರ ಬದಾಮಿ ತಲೂಕಿನ ಅನಂತಗಿರಿ ಗ್ರಾಮದಲ್ಲಿ ತನ್ನ ಹೆಂಡತಿ ಮಕ್ಕಳ ಜೊತೆಗೆ ವಾಸವಾಗಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯವರು ಹಿರೇಮಣ್ಣೂರು ಗ್ರಾಮಕ್ಕೆ ಬರುವುದಿಲ್ಲ ಎಂದರೆ ಸಾಕ್ಷಿಯು 2-3 ತಿಂಗಳಿಗೊಮ್ಮೆ ಬಂದಿರುತ್ತಾರೆ ಎಂದು

ನುಡಿದಿರುತ್ತಾರೆ. 2 ನೇ ಪ್ರತಿವಾದಿಯವರು ಹಿರೇಮಣ್ಣೂರು ಗ್ರಾಮಕ್ಕೆ ಬಂದಾಗ ನನ್ನನ್ನು ಮಾತನಾಡಿಸುತ್ತಾರೆ. ಇತ್ತೀಚೆಗೆ 2 ನೇ ಪ್ರತಿವಾದಿಯವರು ಹಿರೇಮಣ್ಣೂರು ಗ್ರಾಮಕ್ಕೆ ಯಾವ ದಿನಾಂಕ ಯಾವ ತಿಂಗಳಿನಂದು ಬಂದಿದ್ದರು ಎಂದರೆ ಸಾಕ್ಷಿಯು 3-4 ತಿಂಗಳ ಹಿಂದೆ ಬಂದಿದ್ದರು ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಯವರು ಯಾವ ದಿನಾಂಕದಂದು ಹಿರೇಮಣ್ಣೂರು ಗ್ರಾಮಕ್ಕೆ ಬಂದಿದ್ದರು ಎಂದು ನಿರ್ದಿಷ್ಟವಾಗಿ ನನಗೆ ಹೇಳಲು ಬರುವುದಿಲ್ಲ. 2 ನೇ ಪ್ರತಿವಾದಿಯವರು 2023 ನೇ ಸಾಲಿನಲ್ಲಿ ಯಾವ ದಿನಾಂಕ ಯಾವ ತಿಂಗಳು ಹಿರೇಮಣ್ಣೂರು ಗ್ರಾಮಕ್ಕೆ ಬಂದಿದ್ದರು ಎಂದು ಕೇಳಲಾದ ಪ್ರಶ್ನಗೆ ಸಾಕ್ಷಿಯು ಬಂದಿದ್ದರು ಆದರೆ ದಿನಾಂಕ , ವಾರ , ತಿಂಗಳು ನನಗೆ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಯವರ ಜಮೀನನ್ನು ಯಾರು ಬಿತ್ತಿ ಬೆಳೆಯುತ್ತಾರೆ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಯಾರು ಬಿತ್ತನೆ ಮಾಡುವುದಿಲ್ಲ ಖಾಲಿ ಬಿದ್ದಿರುತ್ತದೆ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಯವರ ಜಮೀನು ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಖಾಲಿ ಬಿದ್ದಿರುತ್ತದೆ. 2 ನೇ ಪ್ರತಿವಾದಿಯವರ ಜಮೀನು ಸುಮಾರು 3 ವರ್ಷದಿಂದ ಖಾಲಿ ಬಿದ್ದಿರುತ್ತದೆ. 2 ನೇ ಪ್ರತಿವಾದಿಯವರು ಹಿರೇಮಣ್ಣೂರು ಗ್ರಾಮದಲ್ಲಿರುವ ತಮ್ಮ ಜಮೀನಿನಲ್ಲಿ ಬಿತ್ತನೆ ಮಾಡಲು ಬಂದರೆ ವಾದಿಯವರು ಹೊಡಿ-ಬಡಿ ಮಾಡುತ್ತಾರೆ ಎನ್ನುವ ಉದ್ದೇಶದಿಂದ ಹಿರೇಮಣ್ಣೂರು ಗ್ರಾಮಕ್ಕೆ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿ ಹಿರೇಮಣ್ಣೂರು ಗ್ರಾಮದಲ್ಲಿ , ಅಬ್ಬಿಗೇರಿ ಗ್ರಾಮದಲ್ಲಿ ಮತ್ತು ಹುಲ್ಲೂರು ಗ್ರಾಮದಲ್ಲಿ ಬೇರೆ ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿಯು ನಮ್ಮ ಊರಿನಲ್ಲಿ ಇರುತ್ತವೆ ಎಂದು ನುಡಿದಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ 3 ನೇ ವಾದಿಯವರು ಮಾಹಿತಿಯನ್ನು ನೀಡಿರುತ್ತಾರೆ. ನನಗೆ ದಾವೆಯ ಬಗ್ಗೆ ಯಾವುದೇಮಾಹಿತಿ ಇಲ್ಲದೇ ಇದ್ದರೂ ಸಹ 3 ನೇ ವಾದಿಯವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**